ಎಂತಹ 'ಘನ' ರೋಲ್‌ಕಾಲನ್ನೂ ಮುಗಿಸಿ ಎಲ್ಲರನ್ನೂ ಡಿಸ್‌ಪರ್ಸು ಮಾಡಿಬಿಡುತ್ತಿದ್ದರು. ಇದರಿಂದ ಸಿಬ್ಬಂದಿಗಳಿಗೆ ಡ್ಯೂಟಿ ಆರಂಭವಾಗುವುದರೊಳಗೆ ತಮ್ಮ ತಮ್ಮ ಪ್ರೈವೇಟು ಕೆಲಸಗಳನ್ನು ಮಾಡಿಕೊಳ್ಳಲು ಸಾಕಷ್ಟು ಸಮಯ ಸಿಕ್ಕುತ್ತಿತ್ತು. ಈ ಕಾರಣದಿಂದಲೇ ರೋಲ್‌ಕಾಲ್ ಮಾಡಿದರೆ ಚಿತ್ತರಂಜನ ಸಾಹೇಬರ ರೀತಿಯಲ್ಲಿ ಮಾಡಬೇಕು ಎಂದು ಕೆಲವರು ಕಂಡಕಂಡಲ್ಲಿ ಢಾಣಾಡಂಗುರ ಹೊಡೆದ ಪರಿಣಾಮ ಈ ಸುದ್ದಿ ಸಾಹೇಬರ ಬ್ಯಾಚುಮೇಟುಗಳ ಕಿವಿಗೂ ಬಿದ್ದು 'ಅದ್ಹೆಂಗ ಮಾಡತೀಯಾ... ನಮಗೂ ಸೊಲುಪ ಹೇಳಿಕೊಡಲೇಯಪ್ಪಾ...' ಎಂದು ಅವರ ಬೆನ್ನು ಬಿದ್ದುದೂ ಆಯಿತು.

ಹೀಗೆ ಯಾವುದರಲ್ಲೇ ಆಗಲಿ, ತಮ್ಮದೇ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಬರುತ್ತಿದ್ದ ಚಿತ್ತರಂಜನ ಸಾಹೇಬರ ಕೀರ್ತಿಪತಾಕೆ ಉತ್ತರ ಕರ್ನಾಟಕ ಭಾಗದಲ್ಲಿ ಹಬ್ಬುತ್ತಲೇ ಹೋದದ್ದರಲ್ಲಿ ಏನೂ ಆಶ್ಚರ್ಯವಿರಲಿಲ್ಲ. ಸಾಹೇಬರ ನಿಷ್ಠೆಯ ಬಗೆಗಂತೂ ಯಾರೂ ದೂಸರಾ ಮಾತನಾಡುವಂತೆ ಇರಲಿಲ್ಲ. ಇಷ್ಟೆಲ್ಲಾ ಇದ್ದ ಮೇಲೆ ಅವರ ರಾತ್ರಿಗಸ್ತೂ ಕೂಡ ವಿಶೇಷವಾಗಿಯೇ ಇರಬೇಕಲ್ಲವೇ? ಖಂಡಿತಾ! ಅದರ ಬಗ್ಗೆಯೂ ಹೇಳುವುದಕ್ಕೆ ಸಾಕಷ್ಟು ವಿಷಯಗಳಿವೆ. ರಾತ್ರಿಗಸ್ತು ಮಾಡುವುದಕ್ಕೆಂದೇ ಸಾಹೇಬರು ಮುಂಬಯಿಯ ಸ್ನೇಹಿತರೊಬ್ಬರ ಕಡೆಯಿಂದ ಲೆದರಿನ ಜರ್ಕಿನೊಂದನ್ನು ತರಿಸಿಕೊಂಡಿದ್ದರು. ಸೆಪ್ಟೆಂಬರು ಕಳೆಯುವ ಮೊದಲೇ ಆ ಕಡೆಯೆಲ್ಲಾ ಗದಗುಡುವ ಚಳಿ. ಸರಿಯಾಗಿ ರಾತ್ರಿ ಹನ್ನೆರಡಕ್ಕೆ ಜರ್ಕಿನ್ನು ಧರಿಸಿ ಬೂಟು ಕೊಡವಿಕೊಂಡು ಸಾಹೇಬರು ಜೀಪು ಹತ್ತಿದರೆಂದರೆ ಬೆಳಗಿನ ಜಾವ ನಾಲ್ಕೂವರೆ ಐದರ ತನಕವೂ ಜೀಪು ಎಲ್ಲಿಯೂ ನಿಲ್ಲುವಂತಿರಲಿಲ್ಲ. ಅಷ್ಟು ಕಟ್ಟುನಿಟ್ಟಿನ ರೌಂಡ್ಸು! 'ಏನ್ಹಾರ್... ಆ ಪರಿ ಸುತ್ತುಸ್ತಾರೆ? ಒಂದು ಗಲ್ಲೀನೂ ಬಿಡಂಗಿಲ್ಲ, ಒಂದು ವಟಾರನ್ನೋ ಬಿಡಂಗಿಲ್ಲ. ಸ್ಟೇರಿಂಗು ತಿರುಗಿಸೀ ತಿರುಗಿಸಿ ಸಾಕಾಗಿ ಹೋಯ್ತುದೆ ಸಾರ್. ಒಂದು ನಿಮಿಷವೂ ಕಣ್ಣು ಮುಚ್ಚೋಕಾಗಲ್ಲ. ಹೋಗ್ಲೀ, ಏನಾರ ಮಾತಾಡ್ತಾರಾ ಕೇಳುಸ್ಕಳವಾ ಅಂದ್ರೆ ಅದೂ ಇಲ್ಲ. ನಾವೇ ಏನಾರ ಮಾತನಾಡಿದ್ರೂ ಬರೀ ಹ್ಞೂಂ... ಹ್ಞಾಂ... ಅಷ್ಟೇಯ. ಎಂಗ್ ಸಾರ್ ಇವರತ್ರ ಏಗೋದು?...' ಅಂತ ಸಾಹೇಬರ ಡ್ರೈವರು ಸಿದ್ದೀಕ ಗೋಳಾಡುತ್ತಿದ್ದ.

ಕೊನೆಗೂ ಅದೊಂದು ದಿನ ಆ ಸಣ್ಣ ಅಚಾತುರ್ಯ ನಡೆದೇಹೋಯಿತು. ಆವತ್ತು ಸಾಹೇಬರು ರಾತ್ರಿ ಗಸ್ತಿಗೆ ತಯಾರುಗೊಂಡು ಜೀಪನ್ನೇರಿದ್ದರು. ಮಧ್ಯರಾತ್ರಿವರೆಗೆ ಎಲ್ಲವೂ ಸುಸೂತ್ರವಾಗಿಯೇ ಇತ್ತು. ಸಿದ್ದೀಕ ಅದೇನು ಆವತ್ತು ಮನೇಲಿ ಜಗಳವಾಡಿಕೊಂಡೇ ಬಂದಿದ್ದನೋ? ಅಥವಾ ಗಡದ್ದಾಗಿ ಬಿರಿಯಾನಿಯನ್ನೇ ಮೇಯ್ದಿದ್ದನೋ? ಅವನ ಕಂಟ್ರೋಲು ಮೀರಿ ನಿದ್ದೆ ಅವನನ್ನು ಆವರಿಸಿಕೊಂಡುಬಿಟ್ಟಿದೆ. ದಿವ್ಯವಾದ ಗಳಿಗೆಯೊಂದರಲ್ಲಿ ಸ್ಟೇರಿಂಗು ಹಿಡಿದುಕೊಂಡೇ ಕಣ್ಣುಗಳನ್ನು ಸೆಕೆಂಡುಗಳ ಕಾಲ ತೇಲಿಸಿದ್ದಾನೆ. ನೇರವಾಗಿ ಹೋಗುತ್ತಿದ್ದ ಜೀಪು ಹಾಗೇ ಪಕ್ಕಕ್ಕೆ ಸರಿಯುತ್ತಾ ಬಂದು ಫುಟ್‌ಪಾತಿನ ಕಟ್ಟೆಯ ಮೇಲೆ ಧಡ್ಡನೇ ಹತ್ತಿದೆ. ಗಟ್ಟಿಯಾಗಿ ತಮ್ಮ ಸೀಟಿನಲ್ಲಿ ತಳವೂರಿಕೊಂಡು ಕುಂತಿದ್ದ ಚಿತ್ತರಂಜನ ಸಾಹೇಬರು ಇದರ ಪರಿಣಾಮವಾಗಿ ಒಂದೂವರೆ ಫೂಟು ಗಾಳಿಯಲ್ಲಿ ಮೇಲೆದ್ದು ಮತ್ತೆ ಸ್ವಸ್ಥಾನಕ್ಕೆ ಬಂದಿದ್ದಾರೆ. ಜೀಪಿನ ಟಾಪು ನೆತ್ತಿಗೆ ಬಡಿದು ತಲೆಯ ಆ ಭಾಗ ಬುರಬುರನೆ ಊದಿಕೊಂಡಿದೆ. ತಕ್ಷಣ ಗಾಡಿಯನ್ನು ಕಂಟ್ರೋಲಿಗೆ ತೆಗೆದುಕೊಂಡ ಅನುಭವಿಯಾದ ಸಿದ್ದೀಕ ಮತ್ತೆ ರಸ್ತೆಗೆ ಎಳೆದು ನಿಲ್ಲಿಸಿದ್ದಾನೆ. ಇದಾದ ಮೂರ್ನಾಲ್ಕು ನಿಮಿಷಗಳ ಕಾಲ ಸಾಹೇಬರ ಬಾಯಿಂದ ಮಾತೇ ಹೊರಬಂದಿಲ್ಲ. ಸುಮ್ಮನೇ ತಲೆ ಹಿಡಿದುಕೊಂಡು ಕುಳಿತುಬಿಟ್ಟಿದ್ದಾರೆ. ನಂತರ ನಿಧಾನವಾಗಿ ಸುಧಾರಿಸಿಕೊಂಡವರು, 'ಲೇ ಸಿದ್ದೀಕ, ಏನು ನನ್ನ ಪ್ರಾಣ